SRI B. SUBBAIAH SHETTY (Minister for Education).—[On behalf of SRI M. MALLAPPA (Minister for Health and Family Welfare)].—

(*a*) There is no proposal to upgrade the present Health Centre at Byndur.

(*b*) Does not arise.

ಶ್ರೀ ಎ. ಜಿ. ಕೊಡಗಿ.—ಸ್ವಾಮಿ, "ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಬೇಕಾದ ದರ್ಜೆಗನುಗುಣವಾಗಿ ಮೇಲ್ದರ್ಜೆಗೇರಿಸಲು ಸಲಹೆಯೊಂದು ಸರ್ಕಾರ ಸಮಿತಿಯಲ್ಲಿ ಇದೆಯೆ? ಎಂದು ಕೇಳಿರುವುದಕ್ಕೆ, ತಮ್ಮ (ಅ) ಉತ್ತರದಲ್ಲಿ "ಬೈಂದೂರಿನಲ್ಲಿ ಈಗಿರುವ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಯಾವ ಸಲಹೆಯೂ ಇರುವುದಿಲ್ಲ" ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ತಮ್ಮ ಇಲಾಖೆಯ ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಸಮಿತಿಯವರು ಈ ಸಲಹೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಪತ್ರ ನನ್ನಲ್ಲಿದೆ. ಇಷ್ಟೇ ಅಲ್ಲ ತಾರೀಖು 20-2-1978 ಮಾರ್ಚ್ 1978ರಲ್ಲಿ ಈ ಸಲಹೆಯನ್ನು ಪರಿಶೀಲಿಸಲಾಗುವುದು ಎಂದು ಮಾನ್ಯ ಮಂತ್ರಿಗಳೇ ಉತ್ತರವನ್ನು ಕೊಟ್ಟಿದ್ದಾರೆ. ವಿಷಯ ಈ ರೀತಿ ಇರುವಾಗ ತಾವು ನೋಡಿದರೆ ಸರ್ಕಾರದಲ್ಲಿ ಇಂಥ ಯಾವ ಸಲಹೆಯೂ ಇರುವುದಿಲ್ಲ ಎಂದು ಹೇಳುತ್ತಿದ್ದೀರಿ. ಇದರ ಅರ್ಥ ಏನು?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಇಲ್ಲಿ ಸಲಹೆ ಸರಿಯಾಗಿಲ್ಲವೆಂದು ಇದೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್‌ನವರು ಪತ್ರ ಬರೆದು ಶಿಫಾರಸ್ಸು ಮಾಡಿದ್ದಾರೆ ಎಂದು. ಆದರೆ ಸದಸ್ಯರು ಹೇಳುವಂತಹ ಸಲಹೆ ಯಾವುದೂ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ. ಮಂತ್ರಿಗಳು ಏನು ಪತ್ರ ಬರೆದಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ it is true. It is being examined.

ಶ್ರೀ ಎ. ಜಿ. ಕೊಡಗಿ.—ಸ್ವಾಮಿ, ಇದೊಂದು ಸಮಸ್ಯೆಯಾಗಿದೆ. ನಿಮ್ಮ ಇಲಾಖೆಯ ಡೈರೆಕ್ಟರ್ ರವರು ನಮ್ಮ ಸಲಹೆಗಳನ್ನು ಕೇಳಿದ್ದಾರೆ. ಈ ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಪ್‌ಗ್ರೇಡ್ ಮಾಡುವ ಸಲಹೆಯನ್ನು ತಿರಸ್ಕಾರ ಮಾಡಿಲ್ಲ. ವಿಷಯ ಈ ರೀತಿ ಇರುವಾಗ ಮಾನ್ಯ ಸಚಿವರು, ಸರ್ಕಾರದ ಮುಂದೆ ಯಾವ ಸಲಹೆಯೂ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದುದರಿಂದ ಇದಕ್ಕೆ ಸಮಗೊಂದು ಸ್ಪಷ್ಟೀಕರಣ ಕೊಡಬೇಕು.

SRI B. SUBBAIAH SHETTY.—There is some misunderstanding, ಡೈರೆಕ್ಟರವರು ಪತ್ರವನ್ನು ಕಳುಹಿಸಿದ್ದಾರೆ, He has recommended. It is true ಆದರೆ ಈ ಬೈಂದೂರು ಆರೋಗ್ಯ ಕೇಂದ್ರವನ್ನು ಅಪ್‌ಗ್ರೇಡ್ ಮಾಡುವ ವಿಚಾರ ಇದುವರೆಗೂ ಸರ್ಕಾರದಲ್ಲಿಲ್ಲ. The recommendation and the application of the hon. Member are being processed. That is what has been said by the Hon. Minister for Health.

ಶ್ರೀ ಎ. ಜಿ. ಕೊಡಗಿ.—ಜಿಲ್ಲಾಧಿಕಾರಿಗಳ ಶಿಫಾರಸನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇನ್ನಾದರೂ ಈ ಅಂಶವನ್ನು ಗಮನಿಸಿ ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅದನ್ನು ಪರಿಶೀಲಿಸಲಾಗುತ್ತದೆ.

Mahadevapura Bridge in Srirangapatna Taluk

262. SRI M. SRINIVASA (Srirangapatna).—Will the Minister for Public Works be pleased to state :—

(*a*) when was the construction of the Mahadevapura bridge across River Cauvery in Srirangapatna Taluk started ;

(*b*) the reasons for delay in construction work ;

(c) when is it expected to be completed ?

SRI S. BANGARAPPA (Minister for Public Works,—

(a) On 15th May 1970.

(b) 1. Delay in handing over the lands.

2. The work was entrusted to M/s. Boraiah and Basavaiah on Tender (for the alternate designs and drawings of the contractor). They stopped the work in the middle and represented for increased rates. The Government after examining the issue directed to terminate to contract and take up the work through Karnataka State Construction Corporation Limited. The balance work has therefore been entrusted to Karnataka State Construction Corporation Limited.

3. Meagre provision in the budget, has also contributed to the slow progress ;

(c) The target date indicated to the contractor is 31st December 1978.

It is reported, that the progress on the work by the Karnataka State Construction Corporation is slow and the work may take some more time.

ಶ್ರೀ ಎಂ. ಶ್ರೀನಿವಾಸ.—ಸ್ವಾಮಿ, ಈ ಮಂಡದೇವಪುರದ ಸೇತುವೆಯ ಕೆಲಸ ೧೯೭೦ರಲ್ಲಿ ಪ್ರಾರಂಭವಾಗಿದ್ದರೂ ಸಹ ಇನ್ನುವರೆಗೂ ಪೂರ್ತಿಯಾಗಿಲ್ಲ, ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎಂದು ಕೇಳಿರುವ ಪ್ರಶ್ನೆಗೆ ತಾವು ಕೊಟ್ಟಿರುವ ಉತ್ತರ ಬಹಳ ಅಸ್ಪಷ್ಟವಾಗಿದೆಯೆಂದು ನಮಗನ್ನಿಸುತ್ತಿದೆ. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ಕೊಡುವುದಕ್ಕಾಗುತ್ತಿಲ್ಲವೆ?

† ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಬ್ರಿಜ್ಜನ್ನು ಪ್ರಾರಂಭ ಮಾಡಿದ್ದು ೧೯೭೦ರಲ್ಲಿ ಎಂಬುದೂ ನಿಜ ಮತ್ತು ಇದರಲ್ಲಿ ತಡವಾಗಿದೆ ಎಂಬುದೂ ಸರ್ಕಾರದ ಗಮನದಲ್ಲಿದೆ. ಈ ಮಾತನ್ನು ಒಪ್ಪುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಈ ಕೆಲಸವನ್ನು ಎಷ್ಟು ಕಾಲದಲ್ಲಿ ಮುಗಿಸಿ ಕೊಡುತ್ತೀರಿ ಎಂದು ಕೇಳಿದ್ದಾರೆ. ಈ ಕೆಲಸವನ್ನು ಕರ್ನಾಟಕ ಕಾರ್ಪೊರೇಷನ್‌ಗೆ ವಹಿಸಿದ ಮೇಲೆ ಇದು ಸರಿಯಾಗಿ ಕೆಲಸ ಮಾಡದೇ ಹೋದುದರಿಂದ, ಈಗ ಇದಕ್ಕೆ ನಾವು ಕಳೆ ತುಂಬುತ್ತಿದ್ದೇವೆ. ಇದನ್ನು ಇಷ್ಟೇ ದಿವಸದೊಳಗೆ ಮುಗಿಸಿಕೊಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತೂ ಆದಷ್ಟು ಜಾಗ್ರತೆ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಪೆಚ್. ಡಿ. ಚೌಡಯ್ಯ.—ಸ್ವಾಮಿ, ಈ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುವುದಿಲ್ಲ ವೆಂಬ ಅಂಶ ಅವರಿಗೆ ಈ ಕೆಲಸವನ್ನು ವಹಿಸಿದ ಮೇಲೆ ತಮ್ಮ ಗಮನಕ್ಕೆ ಬಂತೋ ? ಅಥವಾ ಆದಕ್ಕೂ ಮೊದಲೇ ಬಂದಿತ್ತೊ ?

ಶ್ರೀ ಎಸ್. ಬಂಗಾರಪ್ಪ.—ಈ ಕಾರ್ಪೊರೇಷನ್ ಮೊದಲು ಸರಿಯಾಗಿ ಕೆಲಸ ಮಾಡುತ್ತಿತ್ತು. ಈ ವಿಷಯದ ಬಗ್ಗೆ ಮಾನ್ಯ ಸದಸ್ಯರ ಹತ್ತಿರ ಮಾತನಾಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಅಂತೂ ಈ ಕೆಲಸವನ್ನು ಈ ಕಾರ್ಪೊರೇಷನ್‌ನವರಿಂದಲೇ ಮಾಡಿಸಬೇಕೆಂದು ನನ್ನ ಇಚ್ಛೆ.

ಶ್ರೀ ಎಂ. ಸಿ. ಬಸಪ್ಪ.—ಈ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ರಾಜ್ಯದ ನಾನಾ ಕಡೆಗಳಲ್ಲಿ ಇದಕ್ಕೆ ವಹಿಸಿರುವ ಕೆಲಸಗಳನ್ನು ತಾವು ಸರ್ಕಾರಕ್ಕೆ ವಾಪಸ್ಸು ತೆಗೆದು ಕೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಬೋರಯ್ಯ, ಬಸವಯ್ಯ ಮಿಜ್ಜಿಯವರು ಈಗ ರೇಟ್ಸ್ ರಿವೈಸ್ ಆಗಿದೆ, ಬೆಲೆಗಳು ಜಾಸ್ತಿಯಾಗಿವೆ ಎಂದು ಹಲವಾರು ಕಾರಣಗಳನ್ನು ತೋರಿಸಿ ಈ ಕೆಲಸವನ್ನು ನಾವು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ ಮೇಲೆ ಅವರಿಂದ ಈ ಕೆಲಸವನ್ನು ಮಾಡಸ್ಸಾ ತೆಗೆದುಕೊಂಡು ಕರ್ನಾಟಕ ಕಾರ್ಪೊರೇಷನ್‌ನವರಿಗೆ ವಹಿಸಿದ್ದೇವೆ.

ಬೇರೆ ಪ್ರಾಜೆಕ್ಟ್‌ಗಳಲ್ಲಿ ಯಾವ ರೀತಿ ಕೆಲಸವಾಗುತ್ತಿದೆ ಆ ರೀತಿಯಾದ ಕೆಲಸ ಇಲ್ಲಿ ಆಗುತ್ತಿಲ್ಲ ಎನ್ನುವುದು ತಮ್ಮ ಅಭಿಪ್ರಾಯವಾಗಿರುತ್ತದೆ. ಅದಕ್ಕೆ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಮತ್ತೆ ಬೇರೆ ಟೆಂಡರನ್ನು ಕರೆದರೂ ಕೂಡ ಬಹಳ ಕಾಲ ಹಿಡಿಯುತ್ತದೆ. ಆದ್ದರಿಂದ ಕಾಲ ಮತ್ತು ಖರ್ಚು ಮಾಡುವ ಬದಲು ಕರ್ನಾಟಕ ಸ್ಟೇಟ್ ಕಾರ್ಪೊರೇಷನ್‌ನವರಿಂದಲೇ ಈ ಕೆಲಸವನ್ನು ಮಾಡಿಸಲು ಸಾಧ್ಯವಿರುವುದರಿಂದ ಅಲ್ಲದ ಅವರಿಂದಲೇ ಮಾಡಿಸಬೇಕೆಂಬ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಆದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಮಾಡಿ ಮುಗಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಶ್ರೀನಿವಾಸ.—ಆಯವ್ಯಯದ ಮುಂಗಡ ಪತ್ರದಲ್ಲಿ ಕಡಿಮೆ ಹಣವನ್ನು ಒದಗಿಸಿರುವುದರಿಂದ ಈ ಕೆಲಸವು ವಿಳಂಬವಾಗುವುದಕ್ಕೆ ಕಾರಣವಾಗಿರುವುದರಿಂದ ಆಯವ್ಯಯ ಪತ್ರದಲ್ಲಿ ಜಾಸ್ತಿ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಬಂಗಾರಪ್ಪ —೧೯೭೯–೮೧ ಬಜೆಟ್‌ನಲ್ಲಿ ಕಡಿಮೆ ಹಣ ಎಂದರೆ ೧೫ ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೇವೆ. ಇದನ್ನು ರಿವೈಸ್ ಮಾಡಲು ಸರ್ಕಾರಕ್ಕೆ ಅಧಿಕಾರವಿರುತ್ತದೆ. ರಿವೈಸ್ ಮಾಡಿ ಹಣವನ್ನು ಜಾಸ್ತಿಮಾಡಿ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾಪ ಉತ್ತರದಲ್ಲಿ ಹೇಳಿದಹಾಗೆ ಅನೇಕ ಕಡೆಗಳಲ್ಲಿ ಡ್ಯಾಮ್ ಇರಲಿ, ಬ್ರಿಡ್ಜಸ್ ಇರಲಿ ಲ್ಯಾಂಡ್ ಆಕ್ವಿಜಿಷನ್ ಮಾಡದೆ ಟೆಂಡರನ್ನು ಕರೆದು ಕೆಲಸ ಶುರು ಮಾಡಿದರೆ ತೊಂದರೆಯಾಗಬಹುದು, ಏತಕ್ಕೆಂದರೆ ಲ್ಯಾಂಡ್ ಅಕ್ವಿಜಿಷನ್ ಮಾಡದೇ ಕನ್‌ಸ್ಟ್ರಕ್ಷನ್ ಮಾಡಲು ಸಾಧ್ಯವಿರುವುದಿಲ್ಲ ಆದ್ದರಿಂದ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರವಾಗಿ ಲ್ಯಾಂಡ್‌ಅನ್ನು ಹೌಜಿಷನ್‌ಗೆ ತೆಗೆದುಕೊಂಡು ಕೆಲಸಗಳನ್ನು ಪ್ರಾರಂಭ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿರುತ್ತದೆ. ಮತ್ತೊಂದು ವಿಷಯ ಅಂದರೆ ಸತ್ಕುಜೋದ ಈ ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಸಂಜೀವಿನಿ ತಂದು ಜೀವ ತುಂಬತಕ್ಕಂಥ ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಇನ್ನು ೬ ತಿಂಗಳಲ್ಲಿ ಮಾಡುತ್ತೀರಾ, ಆಥವಾ ಮೂರು ತಿಂಗಳಲ್ಲಿ ಮಾಡುತ್ತೀರಾ, ಇದಕ್ಕೆ ಆಂಜನೇಯ ಸಂಜೀವಿನಿಯನ್ನು ತಂದ ಹಾಗೆ ಕೂಡಲೇ ತಂದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ನೀವು ಎರಡು ಅಭಿಪ್ರಾಯವನ್ನು ಮುಂದಿಟ್ಟಿದ್ದೀರಿ. ಒಂದು ಲ್ಯಾಂಡ್ ಅಕ್ವಿಜಿಷನ್ ಸಂಬಂಧಪಟ್ಟಂತೆ ಪ್ರಶ್ನೆ, ಕಾನೂನನ್ನು ನಾವು ಪರಿಶೀಲನೆ ಮಾಡದಿದ್ದರೆ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲವೆಂದು ಸರ್ಕಾರದ ಗಮನದಲ್ಲಿರುತ್ತದೆ. ಆದ್ದರಿಂದ ಕಾನೂನನ್ನು ಬದಲಾವಣೆಮಾಡಿ, ಹೆಚ್ಚಿನ ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳಲು ಲ್ಯಾಂಡ್ ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ನ್ನು ನೋಡುತ್ತಿರುವುದರಿಂದ ಸಹಜವಾಗಿಯೇ ಕೆಲಸಕಾರ್ಯಗಳು ಸ್ಥಗಿತವಾಗಿರುವುದಕ್ಕೆ ಕಾರಣವಾಗಿರುತ್ತದೆ. ಎರಡನೆಯದಾಗಿ ಕರ್ನಾಟಕ ಸ್ಟೇಟ್ ಕಾರ್ಪೊರೇಷನ್ ನವರಿಂದ ಈ ಕೆಲಸ ಆಗಲು ಬಹಳ ಹೆಚ್ಚು ಕಾಲ ಆಗಬಹುದೆಂಬ ತಮ್ಮ ಭಾವನೆ ಇರಬಹುದು. ಸ್ವಾಮಿ ಈ ಇಲಾಖೆಯನ್ನು ನಾನು ವಹಿಸಿಕೊಂಡಮೇಲೆ ಅಲ್ಲಿ ಇದ್ದಂಥ ಪರಿಸ್ಥಿತಿಯನ್ನು ನೋಡಿದರೆ ಆ ಕಾರ್ಪೊರೇಷನ್ ಮುಚ್ಚುವ ಸಂಭವವಿತ್ತು. ಅದನ್ನು ಮುಚ್ಚದೆ ಪ್ರೈವೇಟ್ ಕನ್‌ಸ್ಟ್ರಕ್ಷನ್ ಜೊತೆಯಲ್ಲಿ ಕಾಂಪೀಟ ಮಾಡತಕ್ಕಂಥ ಶಕ್ತಿಯನ್ನು ತುಂಬಲು ಸರ್ಕಾರದವರು ಬಂಡವಾಳವನ್ನು ಹೂಡಿ ಅದನ್ನು ಶಕ್ತಿಯುತವನ್ನಾಗಿ ಮಾಡಬೇಕೆಂಬ ಭಾವನೆಯನ್ನು ತಳೆದಿದ್ದೇವೆ. ಇದರ ಸಲುವಾಗಿ ಮೂರನೇ ತಾರೀಖಿನ ದಿವಸ ಬೋರ್ಡ್ ಮೀಟಿಂಗನ್ನು ಕೂಡ ಇಟ್ಟುಕೊಂಡಿದ್ದೇವೆ.

ಒಬ್ಬ ಸದಸ್ಯರು.—ಸ್ವಾಮಿ ಬಸವಯ್ಯ, ಬೋರಯ್ಯ ಇವರ ಕಾಂಟ್ರಾಕ್ಟನ್ನು ಟರ್ಮಿನೇಟ್ ಮಾಡಿದ ಮೇಲೆ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿದ ಮೇಲೆ ಸರ್ಕಾರಕ್ಕೇನಾದರೂ ಹಣ, ಕಾಲ ಉಳಿತಾಯವಾಗುತ್ತದೆಯೇ ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.–ಜೋರಯ್ಯ ಬಸವಯ್ಯನವರ ಕೈತಪ್ಪಿಸಿ ಬೇರೆಯವರಿಗೆ ಯಾರಿಗಾದರೂ ವಹಿಸಿಕೊಡುವುದರಿಂದ ಹಣ ಉಳಿಯುತ್ತದೆ, ಕಾಲವಿಳಂಬವಾಗುವುದಿಲ್ಲ ಎನ್ನುವುದು ಪ್ರಶ್ನೆಯಲ್ಲ. ಮೊದಲಿದ್ದ ಕಾಂಟ್ರಾಕ್ಟನ್ನು ತಪ್ಪಿಸಿ ಕಾರ್ಪೊರೇಷನ್‌ಗೆ ವಹಿಸಿಕೊಟ್ಟಿದ್ದೇವೆ. ಎಷ್ಟು ಹಣ ಉಳಿತಾಯವಾಗುತ್ತದೆಯೆಂದರೆ ವರ್ಷೇ ವರ್ಷೇ ರೇಟ್ಸ್ ರಿವೈಸ್ ಆಗುತ್ತಲೇ ಇರುತ್ತದೆ. ಕಬ್ಬಿಣ ಮತ್ತು ಸಿಮೆಂಟಿನ ಬೆಲೆ ಜಾಸ್ತಿಯಾಗುತ್ತಲೇ ಇರುತ್ತದೆ, ಆದ್ದರಿಂದ ಅದರಂತೆ ರೇಟ್‌ಕೂಡ ಜಾಸ್ತಿಯಾಗುತ್ತದೆ. ಇಲ್ಲಿ ಉಳಿತಾಯದ ಪ್ರಶ್ನೆ ಬರುವುದಿಲ್ಲ. ಕೂಡಲೇ ಸರ್ಕಾರ ಈ ಕೆಲಸವನ್ನು ಮಾಡಬೇಕು ಎನ್ನುವುದೇ ಉದ್ದೇಶವಾಗಿರುತ್ತದೆ.

Providing Bus Connections from Savanur Town

270. SRI M. M. NADAF (Shiggon).—Will the Minister for Transport and Tourism be pleased to state:—

(*a*) whether the Government is aware of the difficulties being experienced by the people of Savanur, Dharwar District for not having KSRTC bus connection from Savanur Town to the Railway Station for each passenger Train timings,

(*b*) if so, whether the Government would immediately give KSRTC bus connection from Savanur Town to Railway Station?

SRI R. GUNDU RAO (Minister for Transport and Tourism).—

(*a*) Feeder Services of KSRTC have been provided connecting all trains from Savanur Town to Savanur Railway Station for the benefit of the passengers.

This has benefited the travelling public of Savanur and thus no inconvenience is caused to them.

(*b*) Does not arise in view of the replies to clause (*a*) above.

ಶ್ರೀ ಎಂ. ಎಂ. ನಾದಫ್.—ಸ್ವಾಮಿ ನೀವು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ಅಧಿಕಾರಿಗಳು ವಾಸ್ತವಾಂಶವನ್ನು ತಿಳಿಸಿಲ್ಲ. ಸತ್ಯಕ್ಕೆ ದೂರವಾದ ಮಾಹಿತಿಗಳನ್ನು ಕೊಟ್ಟಿದ್ದಾರೆ ಎಂದು ಕಂಡುಬರುತ್ತಿದೆ. ಯಾವ ಯಾವ ರೈಲುಗಳಿಗೆ ಕನೆಕ್ಷನ್ ಕೊಟ್ಟಿರುತ್ತೀರಿ ಹೇಳುತ್ತೀರಾ ಸ್ವಾಮಿ?

†ಶ್ರೀ ಆರ್. ಗುಂಡೂರಾವ್.—ಈಗ ಸದ್ಯಕ್ಕೆ ರೈಲುಗಳು ಯಾವ ಯಾವ ಟೈಮಿಗೆ ಸಾವನೂರು ರೈಲ್ವೆ ಸ್ಟೇಷನ್‌ಗೆ ರೈಲುಗಳು ಬರುತ್ತವೆ, ಆ ವೇಳೆಗೆ ಸರಿಯಾಗಿ ಬಸ್ಸುಗಳನ್ನು ಒದಗಿಸುವುದು ಕಾರ್ಪೊರೇಷನ್ ಕರ್ತವ್ಯವಾಗಿರುತ್ತದೆ. ಅದರಂತೆ ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸುತ್ತಿರುತ್ತಾರೆ. ತಮಗೆ ಬಹುಶಃ ಹಾಗೇನಾದರೂ ಅನುಮಾನವಿದ್ದರೆ ಯಾವ ರೈಲು ಸವನೂರು ನಿಲ್ದಾಣಕ್ಕೆ ಬಂದಾಗ ಬಸ್‌ಗಳು ಇರುವುದಿಲ್ಲ ಎನ್ನುವ ವಿಷಯ ಗಮನಕ್ಕೆ ತಂದರೆ ಆದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಂ. ನಾದಫ್.—ಯಾವ ಟ್ರೈನ್ ಬಂದಾಗಲೂ ಬಸ್ ಕನೆಕ್ಷನ್ ಸಿಕ್ಕುವುದಿಲ್ಲ. ದಯವಿಟ್ಟು ಈಗ ಏನು ತಪ್ಪು ಮಾಹಿತಿಯನ್ನು ಒದಗಿಸಿರುತ್ತಾರೆ, ಅದನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ದಯವಿಟ್ಟು ಅದನ್ನು ಸರಿಪಡಿಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ತಾವು ಇದನ್ನು ನನ್ನ ಗಮನಕ್ಕೆ ತಂದಿರುತ್ತೀರಿ, ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.